**ಸ್ಪೆಷಲ್ ಕೇಸ್ ನಂ. 102/2022 ಪಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 20.08.2024**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

1. ನಾನು ಪಿಯುಸಿ ವರೆಗೆ ಓದಿದ್ದೇನೆ. ನಮ್ಮ ಗ್ರಾಮದಲ್ಲಿ ಒಂದು ಸಾವಿರ ಮನೆಗಳು ಇವೆ. 5-6 ಸಾವಿರ ಜನಸಂಖ್ಯೆ ಇರಬಹುದು. ನಮ್ಮ ಜನಾಂಗದವರಲ್ಲಿ ನಾನು ಮುಖಂಡ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಪಾಪಣ್ಣ ರವರ ಮಗ ಮಲ್ಲಿಕಾರ್ಜುನ ಎಂದರೆ ನಾನೊಬ್ಬನೇ ವ್ಯಕ್ತಿ ಇದ್ದೇನೆ. ಬೇರೆ ಠಾಣೆಗಳಲ್ಲಿ ನಾನು ಬೇರೆ ಬೇರೆ ವ್ಯಕ್ತಿಗಳ ಮೇಲೆ ಎರಡು ಕೇಸುಗಳು ಜಾತಿ ನಿಂದನೆ ಕೇಸುಗಳನ್ನು ಹಾಕಿದ್ದೇನೆ. ಎರಡೂ ಕೇಸು ಇದೇ ನ್ಯಾಯಾಲಯದಲ್ಲಿ ನಡೆಯುತ್ತಿದ್ದೆ. ಈ ಎರಡೂ ಪ್ರಕರಣಗಳೂ ಹಾಗೂ ಸದರಿ ಪ್ರಕರಣದಲ್ಲಿ ನನಗೆ ಒಟ್ಟು ರೂ.1,50,000/- ಹಣ ಬಂದಿರುತ್ತದೆ. ನಾನು ಮಂಡ್ಯ ಹಾಗೂ ಪಾಂಡವಪುರದಲ್ಲಿ ಹಲವಾರು ಸಂಘ ಸಂಸ್ಥೆಗಳಲ್ಲಿ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆಂದರೆ ಸರಿ ಯಲ್ಲ. ನಾನು ಹಲವಾರು ಪ್ರಕರಣಗಳಲ್ಲಿ ಪೊಲೀಸರ ಪರ ಸಾಕ್ಷಿದಾರನಾಗಿ ದಾಖಲೆಗಳಿಗೆ ಸಹಿ ಮಾಡಿದ್ದೇನೆಂದರೆ ಸರಿಯಲ್ಲ.

2. ಪ್ರಕರಣದಲ್ಲಿ ಮನೆ ಕಟ್ಟಲು ಮೊಹಮ್ಮದ್ ಅಲಿ ಎಂಬ ವ್ಯಕ್ತಿ ಮೇಸ್ತ್ರಿ ಆಗಿದ್ದರು. ಸದರಿಯವರು ಹಾಸನದವರು ಎಂದರೆ ನನಗೆ ಗೊತ್ತಿಲ್ಲ. ಅವರು ತಾತ್ಕಾಲಿಕವಾಗಿ ವಾಸ ಇದ್ದರು ಎಂದರೆ ಸರಿ. ಸದರಿ ಪ್ರಕರಣ ಆದ ನಂತರ ಮೊಹಮ್ಮದ್ ಅಲ್ಲಿ ಪಾಂಡವಪುರದಲ್ಲಿ ವಾಸ ಇಲ್ಲ ಎಂದರೆ ಗೊತ್ತಿಲ್ಲ. ದೂರು ಕೊಟ್ಟಾಗಿನಿಂದ ಇಲ್ಲಿಯವರೆಗೂ ನಾನು ಹಾಗೂ ಮೇಸ್ತ್ರಿ ಮುಖಾಮುಖಿ ಭೇಟಿ ಆಗಿಲ್ಲ ಎಂದರೆ ಸರಿ. 2 ನೇ ಆರೋಪಿ ಹೊಸ ಮನೆಯನ್ನು ನಮ್ಮ ಊರಿನಲ್ಲಿ ಕಟ್ಟುತ್ತಿದ್ದರು ಎಂದರೆ ಸರಿ. ಮನೆ ಕಟ್ಟುವ ಸಂಬಂಧ ಮೊಹಮ್ಮದ್ ಅಲಿ ಹಾಗೂ 2 ನೇ ಆರೋಪಿ ನಡುವೆ ಮನೆ ಕಟ್ಟುವ ಸಂಬಂಧ ಮಾತುಕತೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಇವರಿಬ್ಬರ ನಡುವೆ ಒಂದು ಚದರಕ್ಕೆ ರೂ.45,000/- ಕೊಡಬೇಕು ಎಂದು ಮಾತು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಸ್ತ್ರಿ ಶೇಕಡ 70 ರಿಂದ 80 ರಷ್ಟು ಮನೆ ಕೆಲಸ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

3. ಸದರಿ ಕಟ್ಟಡಕ್ಕೆ ಸಂಬಂಧಪಟ್ಟಂತೆ ದಿನಾಂಕ 25.01.2022 ರಂದು ಮೇಸ್ತ್ರಿ ರವರಿಗೆ ರೂ.2,00,000/- ಹೆಚ್ಚುವರಿಯಾಗಿ ಹಣ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಿನದಂದು ಮೇಸ್ತ್ರಿ ನನಗೆ 20 ಜನ ಆಳುಗಳು ಬೇಕು ಎಂದು ನನಗೆ ಫೋನು ಮಾಡಿದ್ದರು. ಸದರಿ ದಿನಾಂಕದಂದು ಮೇಸ್ತ್ರಿ ಹೇಳಿದ ಪ್ರಕಾರ ನಾನು ಜನರನ್ನು ಕರೆದುಕೊಂಡು ಹೋಗಿದ್ದೆ ಎಂದರೆ 16 ಜನರನ್ನು ಕರೆದುಕೊಂಡು ಬಂದಿದ್ದೆ. ಸದರಿ ದಿನಾಂಕದಂದು ಒಂದೇ ದಿವಸ ಮೊದಲನೇ ಬಾರಿಗೆ ಕಟ್ಟಡದ ಕೆಲಸಕ್ಕೆ ಹೋಗಿದ್ದೆ ಎಂದರೆ ಸರಿ. ನನ್ನನ್ನು ಹಾಗೂ 16 ಜನರನ್ನು ಬರಲು 2 ನೇ ಆರೋಪಿ ಕರೆದಿರಲಿಲ್ಲ ಮೇಸ್ತ್ರಿ ಹೇಳಿದ್ದರಿಂದ ಹೋಗಿದ್ದೆವು ಎಂದರೆ ಸರಿ. ಆ ಸಮಯದಲ್ಲಿ 2 ನೇ ಆರೋಪಿಯ ವ್ಯಕ್ತಿತ್ವ ಹಾಗೂ ಅವರ ಪರಿಚಯ ಇರಲಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಆದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.